**ಸಾಕ್ಷಿಗೆ ದಿನಾಂಕ : *24-02-2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು : *3* ನೇ ಪ್ರತಿವಾದಿಯ ಪರ ಶ್ರೀ .ವಿ ಎಸ್ ಕೆ ವಕೀಲರಿಂದಃ</u>**

ನಮ್ಮ ಮನೆತನದ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ.ನಾನು 5 ಎಕರೆ 3 ಗುಂಟೆ ಕ್ಷೇತ್ರದ ಮೇಲೆ ದಾವೆ ಸಲ್ಲಿಸಿರುತ್ತೇನೆ. ಶಿವಮ್ಮ, ಲಕ್ಷ್ಮೀಬಾಯಿ, ನೀಲಮ್ಮ ಮತ್ತು ಚಂದ್ರವ್ವ ರವರು ರಾಮಪ್ಪ ಮತ್ತು ಚಿದಾನಂದ ರವರಿಗೆ ದಾವಾ ಆಸ್ತಿಯಲ್ಲಿ ತಮಗೆ ಪಾಲು ಬೇಡ ಎಂದು ಒಂದು ಸಮ್ಮತಿ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಶಿವಮ್ಮ ರವರು ತಮ್ಮ ಗಂಡು ಮಕ್ಕಳಾದ ರಾಮಪ್ಪ ಮತ್ತು ಚಿದಾನಂದ ರವರು ತಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂದು ಸಮ್ಮತಿ ಪತ್ರದಲ್ಲಿ ಬರೆದು ತಮಗೆ ಪಾಲು ಬೇಡ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಲಕ್ಷ್ಮೀಬಾಯಿ, ನೀಲಮ್ಮ ಮತ್ತು ಚಂದ್ರವ್ವ ರವರು ತಾವು ಗಂಡನ ಮನೆಯಲ್ಲಿ ಇದ್ದುದರಿಂದ ತಮಗೆ ಪಾಲು ಬೇಡ ಎಂದು ಸಮ್ಮತಿ ಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಸಮ್ಮತಿ ಪತ್ರವನ್ನು ತಹಶೀಲ್ದಾರ ಕಚೇರಿಯಲ್ಲಿ ಕೊಟ್ಟ ನಂತರ ಡ ನಂ. 1430 ರಚನೆ ಆಗಿರುತ್ತದೆ ಎಂದರೆ ಸರಿಯಲ್ಲ. ಡ ನಂ. 1430 ನ್ನು ನಾನಾಗಲೀ ಅಥವಾ ಇತರೆ ವಾದಿಯರಾಗಲಿ ಅಥವಾ ನನ್ನ ತಾಯಿ ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಡ ನಂ. 1430 ಕಾರ್ಯಗತ ಆಗಿರುತ್ತದೆ ಎಂದರೆ ಸರಿಯಲ್ಲ. ಹೀಗಾಗಿ ದಾವಾ ಆಸ್ತಿಯಲ್ಲಿ ನನಗೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ.ದಾವಾ ಆಸ್ತಿಯು ಮೊದಲು 5 ಎಕರೆ 13 ಗುಂಟೆ ಇದ್ದು, ಸವಿತಾ ಗುರಿಕಾರ ಮತ್ತು ಚಿದಾನಂದ ಗುರಿಕಾರ ರವರು ತಮ್ಮ ಹೆಸರಿನಲ್ಲಿ ಆದ ನಂತರ ತುಕ್ಕಪ್ಪ, ರಾಮಪ್ಪ, ಮಹಾಂತಪ್ಪ ಮತ್ತು ಗೋವಿಂದಪ್ಪ ರವರಿಗೆ 10 ಗುಂಟೆ ಕ್ಷೇತ್ರವನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಬಿಟ್ಟು ಕೊಡುವಾಗ ಸರ್ವೆ ನಂ. 185/3 ಎಂದು ಇತ್ತು ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ತುಕ್ಕಪ್ಪ, ರಾಮಪ್ಪ, ಮಹಾಂತಪ್ಪ ಮತ್ತು ಗೋವಿಂದಪ್ಪರವರು 5 ಗುಂಟೆ ಕ್ಷೇತ್ರವನ್ನು ಯಲ್ಲವ್ವ ಪೂಜಾರಿ ರವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ.5 ಗುಂಟೆ ಕ್ಷೇತ್ರವನ್ನು ಬಿಟ್ಟು ಕೊಟ್ಟ ನಂತರ ಸರ್ವೆ ನಂ. 185/1 ಎಂದು ತುಕ್ಕಪ್ಪ ರವರ ಮನೆತನಕ್ಕೆ

ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಯಲ್ಲವ್ವ ರವರಿಗೆ ಬಂದ ಜಮೀನಿನ ಸರ್ವೆ ನಂ. 185/5 ಎಂದು ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ತುಕ್ಕಪ್ಪ ಜೀವಂತ ಇರುತ್ತಾರೆ. ತುಕ್ಕಪ್ಪ ರವರನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ತುಕ್ಕಪ್ಪ ರವರ ಸಹೋದರ ರಾಮಪ್ಪ ತೀರಿಕೊಂಡಿರುತ್ತಾರೆ. ರಾಮಪ್ಪ ರವರಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಸೇರಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಾಂತಪ್ಪ ಮತ್ತು ಗೋವಿಂದಪ್ಪ ರವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನನಗೆ ಏನೂ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಇವರನ್ನು ಈ ದಾವೆಯಲ್ಲಿ ಸೇರಿಸಲಾರದೇ ಮತ್ತು ಸರ್ವೆ ನಂ. 185/1 ನ್ನು ಸೇರಿಸಲಾರದೇಈ ದಾವೆಯು ನಡೆಯುವುದಿಲ್ಲ ಎಂದರೆ ಸರಿಯಲ್ಲ. ಯಲ್ಲವ್ವ ರವರನ್ನು ಮತ್ತು ಸರ್ವೆ ನಂ. 185/5 ನ್ನು ಈ ದಾವೆಯಲ್ಲಿ ಸೇರಿಸಲಾರದೇ ಈ ದಾವೆಯು ನಡೆಯುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ. 10 ಗುಂಟೆ ಜಮೀನು ಕೂಡ ಪಿತ್ರಾರ್ಜಿತ ಆಸ್ತಿ ಆಗಿತ್ತು. ನಮ್ಮ ಮನೆತನಕ್ಕೆ ಹಿರೇಕೊಡಗಲಿ ಗ್ರಾಮದಲ್ಲಿ ಒಂದು ಬಿದ್ದ ಮನೆ ಇರುತ್ತದೆ. ಅದು ಕೂಡ ನನ್ನ ಅಜ್ಜನ ಆಸ್ತಿ. ಆ ಮನೆಯ ಪೂರ್ವಕ್ಕೆ ನಮ್ಮ ಅಣ್ಣತಮ್ಮಂದಿರು ಇರುತ್ತಾರೆ, ಪಶ್ಚಿಮಕ್ಕೆ ಮನೆ ಇರುತ್ತದೆ, ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ಮನೆಗಳು ಇರುತ್ತವೆ . ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಲಾರದೇ ಈ ದಾವೆಯು ಕಾನೂನಿನ ಅಡಿಯಲ್ಲಿ ನಡೆಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ 77 ವರ್ಷ ವಯಸ್ಸು ಆಗಿದ್ದು, ಅವರನ್ನು ನೋಡಿಕೊಳ್ಳುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಈ ಕಾರಣವನ್ನು ಬಿಟ್ಟು ಬೇರೆ ಯಾವ ಕಾರಣವೂ ದಾವೆ ಮಾಡಲು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ಸಹೋದರಿಯರು ದಾವಾ ಆಸ್ತಿಯ ಹಕ್ಕನ್ನು ಬಿಟ್ಟು ಕೊಟ್ಟಿದ್ದರೂ ಕೂಡ ನಾನು ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಾಮೂಹಿಕ ಕಬ್ಜಾವಹಿವಾಟಿಯಲ್ಲಿ ಇದ್ದೇನೆ

ಎಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು : 5 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.